ಎಂ.ಜಿ. ಉಮಾ, ಬಳ್ಳಾರಿ
ಸಂಸಾರಕ್ಕೂ, ಕನ್ನಡಿಗೂ ಏನು ವ್ಯತ್ಯಾಸ?



ಕನ್ನಡಿ ಗುಟ್ಟುಗಳನ್ನು ಮುಚ್ಚಿಟ್ಟುಕೊಳ್ಳುವುದಿಲ್ಲ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಈ ವಿಭಾಗದ ದಡ್ಡರ ಪ್ರಶ್ನೆಗಳಿಗೆಲ್ಲಾ ಉತ್ತರಿಸೀ ಉತ್ತರಿಸೀ ನೀವು ಬುದ್ಧಿವಂತರಾದಂತೆ ಕಾಣುವುದಲ್ಲ?
ನನ್ನ ವಿಷಯ ಬಿಡಿ; ನಿಮ್ಮ ಆತ್ಮಾವಲೋಕನ ಮೆಚ್ಚುವಂಥದ್ದು!

ಕೆ.ವಿ. ಗೋವಿಂದಾಚಾರಿ, ಮೈಸೂರು
ಮನೆಯಲ್ಲಿ ಅಜ್ಜಿ, ಅತ್ತೆ, ಸೊಸೆ ಇದ್ದರೆ ಗೃಹಲಕ್ಷ್ಮಿ ಯೋಜನೆಯ ಹಣ ಯಾರಿಗೆ?
ಮನೆಯೊಂದು 3 ಬಾಗಿಲು ಆಗಿ ಒಂದೊಂದು ಬಾಗಿಲಿಗೊಬ್ಬೊಬ್ಬ ಆಧಾರ್ ಸಹಿತ ಗೃಹಲಕ್ಷ್ಮಿ.

ಬಾ.ರಂ. ಸುರೇಶ್, ಶಿವಮೊಗ್ಗ
ಒಳ್ಳೆ ಹುಡುಗಿಯನ್ನು ಪ್ರೀತಿಸುವುದಕ್ಕೆ ಏನು ಮಾಡಬೇಕು?



ನಿಮ್ಮ ಸಹವಾಸದಿಂದ ಅವಳು ಕೆಟ್ಟವಳಾಗದಂತೆ ನೋಡಿಕೊಂಡರೆ ಸಾಕು.

ಎಂ.ಸಿ. ಧನ್ಯತಾ, ಬೆಂಗಳೂರು
ರೇಖಾಗಣಿತಕ್ಕೂ, ಬದುಕಿಗೂ ಏನು ಸಂಬಂಧ?
ಲಂಬಕೋನದಿಂದ ಲಘುಕೋನವಾಗಿ ಸಮಕೋನ ತಲುಪುವುದೇ ಜೀವನ.

ಬಿ. ಚಂದ್ರೇಗೌಡ, ಬೆಂಗಳೂರು
ಮಾತೃವಾತ್ಸಲ್ಯಕ್ಕೂ, ಪಿತೃವಾತ್ಸಲ್ಯಕ್ಕೂ ಏನು ವ್ಯತ್ಯಾಸ?
ಅದು ಕರುಳಿನ ಕರೆ; ಇದು ಹುರುಳಿನ ಕರೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ನಕ್ಷತ್ರಗಳು ನಮ್ಮ ಹಣೆಬರಹವನ್ನು ಬದಲಿಸಲು ಸಾಧ್ಯವೆ?
'ಸ್ಟಾರ್‌ಗಳಂತೂ ಬದಲಿಸಬಲ್ಲರು' ಎಂದನಾ ನಟಿಯ ಅಭಿಮಾನಿ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ನನ್ನ ಪತ್ನಿ ದಿನವೂ ತನಗೆ ಮುತ್ತೈದೆ ಸಾವನ್ನು ಕರುಣಿಸೆಂದು ದೇವರನ್ನು ಬೇಡುವಳಲ್ಲ, ಏಕೆ?
ನೀವಿಲ್ಲದ ದಿನಗಳಲ್ಲಿ ಅವರನ್ನು ಮಕ್ಕಳು ಹೇಗೆ ನೋಡಿಕೊಳ್ಳುವರೆಂದು ತಿಳಿದಿದೆಯಂತೆ.

ನರಸಿಂಹ ಪೈ, ಕಾಸರಕೋಡ
ಆಸ್ಪತ್ರೆಗಳಲ್ಲಿ ಕೇಳಿಸುವಷ್ಟು ಪ್ರಾರ್ಥನೆ ದೇವಾಲಯಗಳಲ್ಲೇಕೆ ಕೇಳಿಸದು?
ಅಂತಿಮ ಪ್ರಾರ್ಥನೆಯ ವಾಲ್ಯೂಮ್ ಹೆಚ್ಚಿರುತ್ತದಂತೆ.

ದಿನೇಶ್, ಗುಡ್ಡದೂರು
ಕೇಳುಗರ ಪ್ರಶ್ನೆಗಳಿಗೆ ಸರಾಗವಾಗಿ ಉತ್ತರಿಸುವ ನಿಮ್ಮ ತಲೆಯಲ್ಲಿ ಕಂಪ್ಯೂಟರ್ ಚಿಪ್ ಇದೆಯೆ?
ನೋ ಚಾನ್ಸ್. ಯಾವ ಎಲೆಕ್ಟ್ರಾನಿಕ್ ಐಟಮ್ಮೂ ಇಷ್ಟು ವರ್ಷ ಬಾಳಿಕೆ ಬಾರದು.

ಎನ್.ವಿ. ಶ್ರೀನಿವಾಸ್, ಮೈಸೂರು
ಶ್ರೀಕೃಷ್ಣನ ನೆನೆದರೂ ಒಂದಿಷ್ಟು ಕಷ್ಟ ಬಂದುಬಿಟ್ಟರೆ ಏನು ಮಾಡಲಿ ರಾಮದೇವರೆ?
ದುರ್ಯೋಧನನಂತೆ ಆಡುವುದನ್ನು ನಿಲ್ಲಿಸಿ.

ಆರ್.ಕೆ. ಹಾದಿಮನಿ, ಧಾರವಾಡ
ಸತ್ತವನು ಎದ್ದು ಬಂದಾಗ 'ದೆವ್ವ ಬಂತು' ಅಂತ ಓಡ್ತಾರೆ. ಯಾಕೆ?
ಮಣ್ಣಾಗಿದ್ದವನು ಹಿಂತಿರುಗುವುದೇ ಇವರಿಗೆ ಮಣ್ಣು ತಿನ್ನಿಸಲೆಂದು ತಿಳಿದು.

ಮಲ್ಲಿಕಾರ್ಜುನ, ಸುರಧೇನುಪುರ
ನ್ಯಾಯಕ್ಕೆ ನ್ಯಾಯಾಲಯ. ಸತ್ಯಕ್ಕೆ?
ಸುಡುಗಾಡು.

ಬಿ. ಬಸವರಾಜ್, ಹರಿಹರ
ನಿರೀಕ್ಷೆಯೇ ನಿರಾಶೆಗೆ ಕಾರಣವೆಂದು ಗೊತ್ತಿದ್ದೂ ಮತ್ತೆ ಮತ್ತೆ ನಿರೀಕ್ಷೆ ಇಟ್ಟುಕೊಳ್ಳುವುದೇಕೆ?
ಏಕೆಂದರೆ ಕತ್ತಲೆಗೆ ಶರಣಾಗದೆ ಬೆಳಕಿನತ್ತ ಸಾಗುವುದೇ ಜೀವನ.

**ಬಹುಮಾನಿತ ಪ್ರಶ್ನೆ**

ಕೆ.ಪಿ. ಮಂಜುನಾಥ್, ಕೆ.ಟಿ.ಹಳ್ಳಿ
ಪ್ರೇಮಿಗಳು ಬಂಡೆಗಳ ಮೇಲೆ 'ಲವ್ ಯೂ' ಬರೆಯುತ್ತಾರೆ. ಏಕೆ?
'ಪ್ರೀತಿ ಕಲ್ಲನ್ನೂ ಕರಗಿಸುತ್ತದೆ' ಎಂಬ ಮಾತನ್ನು ಪರೀಕ್ಷಿಸಲು.

ಮಂಚಾಲಿ ಗುರುರಾಜಾಚಾರು, ಬಳ್ಳಾರಿ
ಪ್ರೇಮಿ ತನ್ನ ಪ್ರೇಯಸಿಗೆ ಮುತ್ತುಗಳನ್ನು ಕೊರಿಯರ್‌ನಲ್ಲಿ ಕಳುಹಿಸಿದರೆ?
ರಿಜೆಕ್ಟೆಡ್ ಎಂದು ಹಿಂದಕ್ಕೆ ಬರುತ್ತದೆ.

ವಸುಧಾ ಜೈಶಂಕರ್, ಬೆಂಗಳೂರು
ತತ್ತ್ವಜ್ಞಾನಿಯ ಆತ್ಮ ತಲೆಯಲ್ಲಿ; ಕವಿಯದು ಹೃದಯದಲ್ಲಿ; ಗಾಯಕನದು ಕಂಠದಲ್ಲಿ. ರಾಜಕಾರಣಿಯದು?
ಕುರ್ಚಿಯಲ್ಲಿ. ಅದು ಹೋದರೆ ಅವನು ಸತ್ತಂತೆ.

ಸುರಭಿ ಗಣೇಶ್, ದೊಡ್ಡಬಳ್ಳಾಪುರ
ಕೆಲವರಿಗೆ ಮೌನ ಬಂಗಾರ. ಕೆಲವರಿಗೆ ಮಾತೇ ಬಂಡವಾಳ. ಹೇಗೆ?



ನೆಟ್‌ನಲ್ಲಿ ವಿಷಯ ಸಂಗ್ರಹಿಸುವವರದು ಮೌನ. ವಿಷಯ ಪ್ರಸಾರಕರದು ಮಾತು.

ಬಿ.ಆರ್. ಉಷಾ, ಬೆಂಗಳೂರು
ಇತ್ತೀಚೆಗೆ ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತಿಲ್ಲ. ಕಾರಣವೇನು?
ಕಣ್ಣಿಗೆ ಬಿದ್ದಿಲ್ಲವೆಂಬ ಏಕೈಕ ಕಾರಣ.

ರಾಮಸ್ವಾಮಿ, ಭೀಮನಕಟ್ಟೆ
ವಿಧಾನಸೌಧದಲ್ಲಿ ಅಷ್ಟೆಲ್ಲಾ ಸ್ಥಳ ಇದ್ದರೂ ರೆಸಾರ್ಟ್‌ಗಳಲ್ಲಿ ರಾಜಕೀಯ ಮಾಡುವ ಕಾರಣವಾದರೂ ಏನು?
ಐಪಿಎಲ್ (ಇಪೊಲಿಟಿಕಲ್) ನಿಯಮದಂತೆ ರೆಸಾರ್ಟ್‌ಗಳಲ್ಲಿ ಹರಾಜಾದರಷ್ಟೇ ಟೀಮಿಗೆ ಆಯ್ಕೆ.

■ ರಾಮ್